

# ಮಧುರಾತಿಮಧುರ ರುದ್ರವೀಣೆ ನಾದ

ರುದ್ರವೀಣೆ ಅಥವಾ ಬೀನ್ ವಾದ್ಯ ಭಾರತೀಯ ಸಂಗೀತ ಮೂಲದ್ದೇ ಆಗಿದ್ದರೂ ವಿರಳಾತಿ ವಿರಳ ವಾದ್ಯಗಳ ಗುಂಪಿಗೆ ಸೇರಿದ್ದು. ಇದನ್ನು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಮಾತ್ರ ನುಡಿಸುವುದು. ಈ ವಾದ್ಯ ಕಲಿಯುವವರು, ಕಲಿಸುವವರು ಕೂಡ ಕಡಿಮೆ.

ರುದ್ರವೀಣೆ ಪ್ರಾಚೀನ ವಾದ್ಯವೂ ಹೌದು. ಇದರ ನಾದ ಸಿತಾರ್ ಅನ್ನೇ ಹೋಲುತ್ತದೆ. ಇದನ್ನು ನುಡಿಸಬೇಕಾದರೆ ಸಿತಾರ್ ಕಲಿಯಬೇಕು. ಶಾಸ್ತ್ರೀಯ ಸಂಗೀತದ ದ್ರುಪದ್ ಮತ್ತು ಖಯಾಲ್ ಪ್ರಕಾರಕ್ಕೆ ಅತ್ಯಂತ ಸೂಕ್ತವಾದ ವಾದ್ಯವಿದು.

ಭಾರತೀಯ ಸಂಗೀತದ ವೀಣೆ ವೈವಿಧ್ಯಗಳಲ್ಲಿರುವ ವಿಚಿತ್ರ ವೀಣೆ, ಮೋಹನ ವೀಣೆ, ಸರಸ್ವತಿ ವೀಣೆ, ಚಿತ್ರವೀಣೆಗಳಿಗಿಂತಲೂ ರುದ್ರವೀಣೆ ವಿಭಿನ್ನ. ಸ್ವರೂಪ ಹಾಗೂ ನಾದವೂ ಭಿನ್ನವೇ.

ರುದ್ರವೀಣೆಯ ಪೌರಾಣಿಕ ಇತಿಹಾಸ ರೋಚಕ. ಒಮ್ಮೆ ಕೈಲಾಸ ಪರ್ವತದಲ್ಲಿ ಶಿವ ಪಾರ್ವತಿಯನ್ನು ನೋಡಿ ರೂಪಿಸಿದ ವಿಶಿಷ್ಟ ವಾದ್ಯ ಈ ರುದ್ರವೀಣೆ ಎನ್ನುತ್ತದೆ ಪುರಾಣ. ರುದ್ರವೀಣೆಯನ್ನು ಮಂದ್ರ, ಅತಿಮಂದ್ರ ಮತ್ತು ಮಧ್ಯ ಸಪ್ತಕದಲ್ಲಿ ನುಡಿಸಬಹುದು. ಆದರೆ ತಾರ ಸಪ್ತಕದಲ್ಲಿ ನುಡಿಸುವುದು ಕೊಂಚ ಕಷ್ಟ.

ಇದಕ್ಕೆ ಪಖಾವಾಜ್ ಸೂಕ್ತವಾದ ಸಾಥಿ ವಾದ್ಯ. ರುದ್ರವೀಣೆಯಲ್ಲಿ ದಿ. ಲಾಲ್‌ಮಣಿ ಮಿಶ್ರಾ ಅನೇಕ ಪ್ರಯೋಗಗಳನ್ನು ಮಾಡಿದ್ದರು. ಷಡ್ಜವನ್ನು ಸೇರಿಸಿ ಒಟ್ಟು 22 ಶ್ರುತಿಗಳನ್ನು ಅಳವಡಿಸಿದ್ದರು. ಜಿಯಾ ಮೊಹಿಯುದ್ದೀನ್ ಡಾಗರ್ ರುದ್ರವೀಣೆಯನ್ನು ಅತ್ಯಂತ ಜನಪ್ರಿಯಗೊಳಿಸಿದವರು. ಅಸಾದ್ ಅಲಿಖಾನ್, ಶಂಷುದ್ದೀನ್ ಫರೀದಿ, ಬಹಾವುದ್ದೀನ್ ಡಾಗರ್ ಬೀನ್‌ಕರ್ ಸುಮಿರ್ ಮಿಶ್ರಾ ಈ ವಾದ್ಯವನ್ನು ನುಡಿಸುತ್ತಿದ್ದ ಖ್ಯಾತನಾಮರು.

■ ಯು.ಎ

